**''ಬರೇ ಬಿದಿರಾದರೆ ಪರವಾಗಿರಲಿಲ್ಲ ಬಿಡು. ಆದರೆ, ಇದು ಹಾಗಲ್ಲವಲ್ಲ...'' ಅವರು ಹೇಳುತ್ತಲೇ ಕಣ್ಣು ಮುಚ್ಚಿಕೊಂಡರು. ಅವರ ಕಣ್ಣಂಚಿನಿಂದ ಎರಡು ಹನಿ ನೀರು ಮೆಲ್ಲ ಮೆಲ್ಲಗೆ ಹೊರಗಿಣುಕಿತು...**

ಪಾತ್ರೆ ಎಲ್ಲಾ ತೊಳೆದು, ಗುಡಿಸಿ ಒರಸಿ ಮಲಗುವ ಕೋಣೆಗೆ ಹೋದಾಗ ಕಣ್ಣು ಮುಚ್ಚಿ ಮಲಗಿದ್ದ ಗಂಡನಿಗಿನ್ನೂ ನಿದ್ದೆ ಬಂದಿಲ್ಲ ಎಂದು ಅವಳಿಗೆ ಗೊತ್ತಾಗದೇ ಇರಲಿಲ್ಲ.

''ಅಲ್ಲಾರೀ... ಕೋಲು...'' ಆಕೆ ಅಷ್ಟು ಹೇಳಬೇಕಾದರೆ ಆತ ದಢಕ್ಕನೆ ಎದ್ದು ಕುಳಿತ. ರುಕ್ಮಿಣಿ ಒಮ್ಮೆಗೆ ಬೆಚ್ಚಿಬಿದ್ದಳು.

''ನಾನೀಗ ನಿದ್ದೆ ಮಾಡಲೋ?... ಕೋಲು ಹುಡುಕಲೋ?...'' ಆಕೆಯನ್ನು ದುರುಗುಟ್ಟಿ ನೋಡಿದ. ಸದ್ದಿಲ್ಲಿ ಕೋಣೆಯಿಂದ ಹೊರ ಜಿಗಿಯಿತೋ ಎಂದು ರುಕ್ಮಿಣಿಗೆ ಒಮ್ಮೆಗೆ ಮುಜುಗರವಾಗಿ ಮುಖ ಸಣ್ಣದಾಯಿತು. ರುಕ್ಮಿಣಿ ಅವನ ಉರಿನೋಟಕ್ಕೆ ನೋಟ ಸೇರಿಸಲಾಗದೆ ತಲೆಕೆಳಗೆ ಹಾಕಿ ದೀಪ ಆರಿಸಿ, ಮೆಲ್ಲ ಬದಿಯಲ್ಲಿ ಬಿದ್ದುಕೊಂಡಳು. ಶಾಂತಮೂರ್ತಿಯಾಗಿರುವ ಮಾವನಿಗೆ ಯಾವ ಘಳಿಗೆಯಲ್ಲಿ ಹುಟ್ಟಿದರೋ ಇವರು! ರುಕ್ಮಿಣಿಗೆ ಹಾಗಂದುಕೊಳ್ಳದೇ ಇರಲಾಗಲಿಲ್ಲ. ಎಷ್ಟು ಯೋಚಿಸಿದರೂ ಕೋಲು ಎಲ್ಲಿ ಹೋಗಿರಬಹುದು ಎಂಬುದು ಹೊಳೆಯಲೇ ಇಲ್ಲ. ಯೋಚನೆಯ ಭಾರಕ್ಕೆ ನಡುರಾತ್ರಿಯ ಹೊತ್ತಿಗೆ ನಿಧಾನಕ್ಕೆ ನಿದ್ದೆಗೆ ಜಾರಿದಳು.

ಬೆಳಗ್ಗೆ ತಡವಾಗಿ ಎದ್ದ ಮಕ್ಕಳು ಬಿಸಿ ಬಿಸಿ ಇಡ್ಲಿ ತಿಂದ ಅನಂತರ ಮೆಲ್ಲನೆ ಅಮ್ಮನ ಹತ್ತಿರ ಬಂದು ನಿಂತಾಗ ಆಕೆ, ಏನು? ಎಂಬ ಹಾಗೆ ಹುಬ್ಬೇರಿಸಿ ನೋಡಿದಳು.

''ಅಜ್ಜನ ಕೋಲು ಹುಡುಕುವುದಕ್ಕೆ ಹೊರಟಿದ್ದೇವೆ. ಅಪ್ಪನಿಗೆ ಹೇಳಬೇಡಿ. ಸುಮ್ಮನೆ ಬೈಗಳು ತಿನ್ನಬೇಕಾಗುತ್ತದೆ'' ಅವರ ಮಾತಿನಲ್ಲಿ ಓಲೈಕೆಯಿತ್ತು. ರುಕ್ಮಿಣಿ ಉತ್ತರಿಸುವ ಬದಲು ಸಮ್ಮತಿ ಸೂಚಕ ಎಂಬ ಹಾಗೆ ಇಬ್ಬರ ತಲೆಯನ್ನು ಸವರಿ ಮುಗುಳ್ನಕ್ಕಳು. ಅಷ್ಟೇ ಸಾಕು ಎಂಬ ಹಾಗೆ ಇಬ್ಬರೂ ಬಿಲ್ಲಿನಿಂದ ಬಿಟ್ಟ ಬಾಣದ ಹಾಗೆ ಹೊರಗೋಡಿದರು. ರುಕ್ಮಿಣಿ ಒಂದುಸಲ ಮಾವನ ಕೋಣೆಯತ್ತ ನೋಟ ಹರಿಸಿದಳು. ಅವರಿಬ್ಬರೂ ಎದ್ದ ಹಾಗೆ ಕಾಣಲಿಲ್ಲ. ಬಹುಶಃ ಮುಂಜಾನೆ ಒಮ್ಮೆ ಎದ್ದು ಮತ್ತೆ ಮಲಗಿರಬೇಕು. ಅವಳ ಯೋಚನೆ ಹತ್ತು ವರ್ಷ ಹಿಂದಿನ ಮೊದಲ ದಿನಗಳಿಗೆ ಓಡಿತು.

ಅವಳು ಆ ಮನೆಗೆ ಮದುವೆಯಾಗಿ ಬರುವಾಗಲೇ ಮಾವನಿಗೆ ಎಪ್ಪತ್ತು ದಾಟಿತ್ತು. ಎಳೆಯ ಪ್ರಾಯದಲ್ಲಿಯೇ ಹುಟ್ಟಿದ ಮಗು ಒಂದು ವರ್ಷಕ್ಕೆ ಯಾವುದೋ ಅಪಘಾತಕ್ಕೆ ಗುರಿಯಾಗಿ ಮರಣಿಸಿತಂತೆ. ಅತ್ತೆಗೆ ಅನಂತರ ಹಲವಾರು ವರ್ಷಗಳು ಗರ್ಭ ನಿಲ್ಲದೆ ಹೊತ್ತಲ್ಲದ ಹೊತ್ತಿಗೆ ಹುಟ್ಟಿದ ಪುತ್ರ ಸಂತಾನದ ಮದುವೆಯಾಗುವ ವೇಳೆಗೆ ಇಬ್ಬರನ್ನೂ ಮುಪ್ಪು ಆವರಿಸಿದ್ದು ಸಹಜವಾಗಿತ್ತು. ಸಾಕಷ್ಟು ಸ್ಥಿತಿವಂತರಾದರೂ ಬಡ ಕುಟುಂಬದ ಹೆಣ್ಣನ್ನು ಮಗ ಆಯ್ಕೆ ಮಾಡಿದಾಗ ತುಟಿ ಪಿಟಿಕ್ ಅಂದವರಲ್ಲ. ರುಕ್ಮಿಣಿಯೂ ಅಷ್ಟೇ ಅಚ್ಚುಕಟ್ಟಾಗಿ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಮನೆಮಂದಿ ಕುಟುಂಬಿಕರೆಲ್ಲರ ಪ್ರೀತಿಗೆ ಪಾತ್ರಳಾಗಿದ್ದಳು. ಮಾವನಿಗೆ ಆಗಲೂ ನಡೆದಾಡುವುದಕ್ಕೆ ಯಾವುದೇ ತೊಂದರೆ ಇರಲಿಲ್ಲ. ಆದರೂ ಈ ಕೋಲು ಹತ್ತಿರವೇ ಬೇಕಿತ್ತು. ಗದ್ದೆಯ ಬದುವಿನಲ್ಲಿ ನಡೆಯುವಾಗೆಲ್ಲ ಕೋಲು ಭದ್ರವಾಗಿ ಮುಷ್ಟಿಯ ಬಂಧನದಲ್ಲಿ